ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/29/2013-14. ದಿನಾಂಕ:06-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಪಿ.ಮಾರಪ್ಪ ತಂದೆ ಸಿದ್ದು ಬಸಪ್ಪ ತಂದೆ ಉರುಫ್ ಪಿಚ್ಚ ಸಿದ್ದಪ್ಪ<br>2)ಸಾವಿತ್ರಮ್ಮ ಗಂಡ ಲೇಟ್ ಜರ್ಮಲಿ ಬಸಪ್ಪ<br>ಅಮಲಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು | ಚಿನ್ನಯ್ಯ ತಂದೆ ಲೇಟ್ ಬೊಮ್ಮಪ್ಪ<br>ಸೋಮಲಾಪುರ ಗ್ರಾಮ<br>ಸಂಡೂರು ತಾಲೂಕು |
| ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 677. ವಿಸ್ತೀರ್ಣ 0-68 ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 677. ವಿಸ್ತೀರ್ಣ 0-68 ಸೆಂಟ್ಸು ಜಮೀನನ್ನು ಸದರಿ ತಾಲೂಕು ಅಮಲಾಪುರ ಗ್ರಾಮದ ಸಾವಿತ್ರಮ್ಮ ಗಂಡ ಲೇಟ್ ಜರ್ಮಲಿ ಬಸಪ್ಪ ಇವರಿಂದ ಸದರಿ ತಾಲೂಕು ಅಮಲಾಪುರ ಗ್ರಾಮದ ಪಿ.ಮಾರಪ್ಪ ತಂದೆ ಸಿದ್ದು ಬಸಪ್ಪ ಉರುಫ್ ಪಿಚ್ಚ ಸಿದ್ದಪ್ಪ ಇವರು ದಿನಾಂಕ 04-03-2013 ರಂದು ಡಾಕ್ಯುಮೆಂಟ್ ನಂಬರ್: 6511/2012-13 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚೌಡಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 12-03-2013 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸಂಡೂರು ತಾಲೂಕು ಸೋಮಲಾಪುರ ಗ್ರಾಮದ ಚಿನ್ನಯ್ಯ ತಂದೆ ಲೇಟ್ ಬೊಮ್ಮಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 32/2012-13 ದಿನಾಂಕ 18-04-2013 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 26-06-2013 ರಿಂದ 06-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಚೌಡಾಪುರ ಗ್ರಾಮದ ಸನಂ 677. ವಿಸ್ತೀರ್ಣ 0-68 ಸೆಂಟ್ಸು ಜಮೀನನ್ನು ಸದರಿ ತಾಲೂಕು ಅಮಲಾಪುರ ಗ್ರಾಮದ ಸಾವಿತ್ರಮ್ಮ ಗಂಡ ಲೇಟ್ ಜರ್ಮಲಿ ಬಸಪ್ಪ ಇವರಿಂದ ದಿನಾಂಕ 04-03-2013 ರ ಡಾಕ್ಯುಮೆಂಟ್ ನಂಬರ್: 6511/2012-13 ರ ಪ್ರಕಾರ ರೂ: 31.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಸವರು ಸದರಿ ವಿವಾದಿತ ಜಮೀನಿನಲ್ಲಿ ನಮಗೆ ಭಾಗವಿದ್ದು ನಮಗೆ ತಿಳಿಸದೇ ನೊಂದಣಿ ಮಾಡಿಸಿ ಕೊಟ್ಟಿರುವುದರಿಂದ ಮತ್ತು ಸದರಿ ವಿವಾದಿತ ಜಮೀನು ನಮ್ಮ ಪಿತ್ರಾರ್ಜಿತ ಜಮೀನಾಗಿರುವುದರಿಂದ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಹಾಜರಾಗಿ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರು ತಮ್ಮ ತಕರಾರು ಬಗ್ಗೆ ತಮ್ಮ ಹಕ್ಕನ್ನು ಸಾಬೀತು ಪಡಿಸುವ ಯಾವುದೇ ದಾಖಲೆಗಳನ್ನು ಹಾಜರಾಗಿ ಸಲ್ಲಿಸದೇ ಇರುವುದರಿಂದ ಮತ್ತು ನೊಂದಾಯಿತ ಕ್ರಯ ಪತ್ರವನ್ನು ರದ್ದುಪಡಿಸುವ ಅಧಿಕಾರ ಕಂದಾಯ ನ್ಯಾಯಾಲಯದ ವ್ಯಾಪಿಗೆ ಒಳಪಡದೇ ಇರುವುದರಿಂದ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 677. ವಿಸ್ತೀರ್ಣ 0–68 ಸೆಂಟ್ಸು ಜಮೀನನ್ನು ದಿನಾಂಕ 04–08–2013 ರ ಡಾಕ್ಯುಮೆಂಟ್ ನಂಬರ್: 6511/2012–13 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಪಿ.ಮಾರಪ್ಪ ತಂದೆ ಸಿದ್ದು ಬಸಪ್ಪ ಉರುಫ್ ಪಿಚ್ಚ ಸಿದ್ದಪ್ಪ. ಅಮಲಾಪುರ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 06–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಪಿ.ಮಾರಪ್ಪ ತಂದೆ ಸಿದ್ದು ಬಸಪ್ಪ ಉರುಫ್ ಪಿಚ್ಚ ಸಿದ್ದಪ್ಪ. ಸಾವಿತ್ರಮ್ಮ ಗಂಡ ಲೇಟ್ ಜರ್ಮಲಿ ಬಸಪ್ಪ ಅಮಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಚಿನ್ನಯ್ಯ ತಂದೆ ಲೇಟ್ ಬೋಮ್ಮಪ್ಪ ಸೋಮಲಾಪುರ ಗ್ರಾಮ ಸಂಡೂರು ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.